# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಪ್ರಾಸಾ-04
ಚಾಸಾ-05

ದಿನಾಂಕಃ 24-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಅಕಲಪ್ಪ |
| **ತಂದೆಯ / ಗಂಡನ ಹೆಸರು** | ಗಂಗಾಧರಪ್ಪ |
| **ವಯಸ್ಸು** | 42 |
| **ಉದ್ಯೋಗ** | ಅಡಿಗೆ ಕೆಲಸ |
| **ವಾಸಸ್ಥಳ** | ಬೂದಿಬೆಟ್ಟ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ಲಕ್ಷ್ಮೀ ನನಗೆ ಗೊತ್ತಿಲ್ಲ. ಆರೋಪಿಯ ಪರಿಚಯ ಇರುತ್ತದೆ. ಆರೋಪಿಗೆ ಮದುವೆ ಆಗಿರುತ್ತದೆ, ಆರೋಪಿಯ ಹೆಂಡತಿ ಮತ್ತು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಬೂದಿಬೆಟ್ಟದಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ವಾಸ ಮಾಡುತ್ತಿದ್ದ. ಸುಮಾರು 2 ವರ್ಷಗಳ ಹಿಂದೆ ರಾತ್ರಿ 10-00 ಗಂಟೆ ಸಮಯದಲ್ಲಿ ನಾನು , ಚಾಸಾ-6 ಹೊಟೆಲ್ ಗೆ ಕಾಫಿ ಕುಡಿಯಲು ಹೋಗಿದ್ದಾಗ ಕಿರುಚಾಡುವ ಶಬ್ದ ಕೇಳಿಸಿತು, ಹೊಟೆಲ್‌ನಲ್ಲಿ ನಿಂತುಕೊಂಡರೆ ಆರೋಪಿ ಮನೆ ಕಾಣಿಸುತ್ತದೆ. ನಾನು ಮತ್ತು ರಮೇಶ ಆರೋಪಿ ಮನೆ ಹತ್ತಿರ ಹೋಗಿ ನೋಡಲಾಗಿ ಲಕ್ಷ್ಮೀ ರವರ ಜೀವ ಹೋಗಿತ್ತು. ಮನೆ ಹೊರಗಡೆ ಶವ ಇತ್ತು, ಶವ ಬೊರಲಾಗಿ ಬಿದ್ದಿತ್ತು. ನಾನು ಶವವನ್ನು ಪರಿಶೀಲಿಸಿ ನೋಡಿರುವುದಿಲ್ಲ. ನಾವು ಆರೋಪಿ ಮನೆ ಹತ್ತಿರ ಹೋದಾಗ ಅವರ ಮನೆಯಲ್ಲಿ ಯಾರೂ ಇರಲಿಲ್ಲ. ಲಕ್ಷ್ಮೀ ಹೇಗೆ ಮೃತಪಟ್ಟಿರುತ್ತಾಳೆಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿರುವುದಿಲ್ಲ. ಲಕ್ಷ್ಮೀ ಸಾವು ಹೇಗೆ ಸಂಭವಿಸಿರುತ್ತದೆ ಅವಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ.

ಆರೋಪಿ ಚಿತ್ರದುರ್ಗ ಜೈಲಿನಲ್ಲಿರುತ್ತಾನೆಂದು ಗೊತ್ತಾಗಿರುತ್ತದೆ. ಆರೋಪಿ ಕೊಲೆ ಮಾಡಿದ್ದಾನೆ ಎನ್ನುವ ಆರೋಪಿದಿಂದಲೇ ಜೈಲಿನಲ್ಲಿರುತ್ತಾನೆ. ಶವದ ಹತ್ತಿರ ರಕ್ತ ಹರಿದಿತ್ತು.

**<u>ಪಾಟೀಸವಾಲು ಶ್ರೀ. ಎಸ್.ಆರ್.ಎ. ವಕೀಲರಿಂದ ಆರೋಪಿ ಪರವಾಗಿ:-</u>**

ಆ ದಿನ ನಾವು ಹೋಗಿದ್ದ ಹೋಟೆಲ್‌ಗೆ ಹೆಸರು ಇರುವುದಿಲ್ಲ, ಸದರಿ ಹೊಟೆಲ್ ಮತ್ತು ಆರೋಪಿ ಮನೆ ಮದ್ಯೆ 1 ಕಿ.ಮೀಟರ್ ಅಂತರ ಇರುತ್ತದೆ. ನಾವು ಹೋಟೆಲ್ ಹತ್ತಿರ ಸುಮಾರು ಜನರು ಇದ್ದರು. ನಾವು ಹೋಟೆಲ್ ಹತ್ತಿರ ಹೋದಾಗ ಬೆಳಿಗ್ಗೆ 5-30 ಗಂಟೆ ಆಗಿತ್ತು. ನಾನು ಶವವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**